

ಸಿದ್ಧಲಿಂಗಯ್ಯ
ಕಲೆ: ಎಸ್.ವಿ. ಹೂಗಾರ್

# ಸಾವಿರಾರು ನದಿಗಳು

ಕನ್ನಡ ಕಾವ್ಯಲೋಕಕ್ಕೆ ಹೊಸ ರಭಸ ತಂದುಕೊಟ್ಟವರು ಹಾಗೂ ದಲಿತ ಸಮುದಾಯದ ಸಿಟ್ಟು–ಸೆಡವು ಪರಿಚಯಿಸಿದವರು ಸಿದ್ಧಲಿಂಗಯ್ಯ (1954–2021). ಅವರ 'ಹೊಲೆ ಮಾದಿಗರ ಹಾಡು' ಸಂಕಲನ ಕನ್ನಡ ಕಾವ್ಯದ ಘನತೆ ಹೆಚ್ಚಿಸಿದ, ಸಾಹಿತ್ಯದ ಅಂತಃಕರಣಕ್ಕೆ ಹೊಳಪು ನೀಡಿದ ಕೃತಿ. 'ಸಾವಿರಾರು ನದಿಗಳು', 'ಕಪ್ಪು ಕಾಡಿನ ಹಾಡು', 'ಅಲ್ಲೆ ಕುಂತವರೆ' ಸಂಕಲನಗಳ ಕವಿತೆಗಳು ದಲಿತ ಸಮುದಾಯದ ತರುಣ ತರುಣಿಯರಿಗೆ ಆತ್ಮವಿಶ್ವಾಸ ತಂದುಕೊಟ್ಟಂತೆಯೇ, ಓದುಗರ ಮನಸ್ಸಿನಲ್ಲಿ ಆತ್ಮಾವಲೋಕನದ ಕಂಪನಗಳನ್ನೂ ಎಬ್ಬಿಸಿದವು. 'ಇಕ್ರಲಾ ವದೀರ್ಲಾ', 'ದಲಿತರು ಬರುವರು ದಾರಿಬಿಡಿ' ರಚನೆಗಳು ಚಳವಳಿಕಾರರಿಗೆ ಪ್ರಾರ್ಥನಾಗೀತೆಗಳಂತಿದ್ದವು. 'ಊರುಕೇರಿ'ಯ ಸಿದ್ಧಲಿಂಗಯ್ಯನವರನ್ನು ಎದುರುಗೊಳ್ಳದೆ ಕನ್ನಡ ಕಾವ್ಯಯಾನ ಅಪೂರ್ಣ.

ನೆನ್ನೆ ದಿನ
ನನ್ನ ಜನ
ಬೆಟ್ಟದಂತೆ ಬಂದರು.

ಕಪ್ಪು ಮುಖ ಬೆಳ್ಳಿಗಡ್ಡ ಉರಿಯುತಿರುವ ಕಣ್ಣುಗಳು
ಹಗಲು ರಾತ್ರಿಗಳನು ಸೀಳಿ ನಿದ್ದೆಯನ್ನು ಒದ್ದರು
ಕಂಬಳಿಗಳು ಕೊರಗಿದವು ಎದ್ದೇಳುವ ರೊಚ್ಚಿಗೆ
ಭೂಕಂಪನವಾಯಿತು ಅವರು ಕುಣಿದ ಹುಚ್ಚಿಗೆ
ಇರುವೆಯಂತೆ ಹರಿವಸಾಲು ಹುಲಿಸಿಂಹದ ದನಿಗಳು
ಧಿಕ್ಕಾರ ಧಿಕ್ಕಾರ ಅಸಮಾನತೆಗೆ
ಎಂದೆಂದಿಗು ಧಿಕ್ಕಾರ ಶ್ರೀಮಂತರ ಸೊಕ್ಕಿಗೆ
ಲಕ್ಷಾಂತರ ನಾಗರುಗಳು ಹುತ್ತಬಿಟ್ಟು ಬಂದಂತೆ
ಊರತುಂಬ ಹರಿದರು
ಪಾತಾಳಕೆ ಇಳಿದರು
ಆಕಾಶಕೆ ನೆಗೆದರು.

ಬೀದಿಯಲ್ಲಿ ಗಲ್ಲಿಯಲ್ಲಿ
ಬೇಲಿಮೆಳೆಯ ಮರೆಗಳಲ್ಲಿ
ಯಜಮಾನರ ಹಟ್ಟಿಯಲ್ಲಿ ಧಣಿಕೂರುವ ಪಟ್ಟದಲ್ಲಿ
ಎಲ್ಲೆಲ್ಲೂ ನನ್ನ ಜನ ನೀರಿನಂತೆ ನಿಂತರು.
ಇವರು ಬಾಯಿ ಬಿಟ್ಟೊಡನೆ
ಅವರ ಬಾಯಿ ಕಟ್ಟಿತು
ಇವರ ಕಂಠ ಕೇಳಿದೊಡನೆ
ಅವರ ದನಿ ಇಂಗಿತು
ಕ್ರಾಂತಿಯ ಬಿರುಗಾಳಿಯಲ್ಲಿ ಕೈಬೀಸಿದ ನನ್ನ ಜನ
ಛಡಿಯ ಏಟು ಹೊಡೆದವರ
ಕುತ್ತಿಗೆಗಳ ಹಿಡಿದರು.

ಪೊಲೀಸರ ದೊಣ್ಣೆಗಳು ಏಜೆಂಟರ ಕತ್ತಿಗಳು
ವೇದಶಾಸ್ತ್ರ ಪುರಾಣ ಬಂದೂಕದ ಗುಡಾಣ
ತರಗೆಲೆಕಸಕಡ್ಡಿಯಾಗಿ
ತೇಲಿತೇಲಿ ಹರಿದವು
ಹೋರಾಟದ ಸಾಗರಕ್ಕೆ
ಸಾವಿರಾರು ನದಿಗಳು.